# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 1332/2023

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ದರ್ಶನ ತಂದೆ ಪ್ರದೀಪ್ ಅಂಬಿಪಿ,
ವಯಸ್ಸು : 29 ವರ್ಷ, ವೃತ್ತಿ : ರೈತಾಪಿ,
ಸಾಃ ಹವಗಿ, ತಾಃ ಹಳಿಯಾಳ.

2. ಸತೀಶ ತಂದೆ ಬಾಳಕೃಷ್ಣ,
ವಯಸ್ಸು : 26 ವರ್ಷ, ವೃತ್ತಿ : ರೈತಾಪಿ,
ಸಾಃ ಹೊರಗಿನಗುತ್ತಿಗೇರಿಗಲ್ಲಿ, ಹಳಿಯಾಳ ಶಹರ,
ತಾಃ ಹಳಿಯಾಳ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ. 251 ರ ಅಡಿ ಆರೋಪಣ ಸಾರಾಂಶ

ದಿನಾಂಕ 17-12-2021 ರಂದು ರಾತ್ರಿ 09-15 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಪೈಕಿ ಹಳಿಯಾಳ ಪಟ್ಟಣದ ಬೊಂಗಾಳಿ ಕಿರಾಣಿ ಅಂಗಡಿ ಎದುರಿಗೆ ಹಳಿಯಾಳ ಯಲ್ಲಾಪುರ ನಾಕಾ ರಸ್ತೆಯ ಮೇಲೆ 1 ನೇ ಆರೋಪಿಯಾದ ನೀನು ಕಾರ ನಂಬರ ಕೆಎ-65/ಎಮ್/0341 ನೇದ್ದನ್ನು ಹಳಿಯಾಳ ಪಟ್ಟಣದ ಶಿವಾಜಿ ಸರ್ಕಲ್ ಕಡೆಯಿಂದ ಯಲ್ಲಾಪುರ ನಾಕಾ ಕಡೆಗೆ ಅತಿವೇಗ ಮತ್ತು ನಿರ್ಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು, ಬೊಂಗಾಳಿ ಕಿರಾಣಿ ಅಂಗಡಿ ಎದುರಿಗೆ ರಸ್ತೆಯ ಮೇಲೆ ಯಾವುದೇ ಸೂಚನೆ ನೀಡದೇ, ಇಂಡಿಕೇಟರ್ ಸೂಚನೆ ನೀಡದೇ ಒಮ್ಮೆಲೇ ನಿಸ್ಕಾಳಜೀತನದಿಂದ ನಿನ್ನ ಕಾರನ್ನು ನಿಧಾನಗೊಳಿಸಿದ್ದರಿಂದ, ನಿನ್ನ ಕಾರಿನ ಹಿಂದೆ ಬರುತ್ತಿದ್ದ 2 ನೇ ಆರೋಪಿತನ ಮೋಟಾರ ಸೈಕಲ ನಂಬರ ಕೆಎ-65-ಇ-8329 ವಾಹನವು ನಿಮ್ಮ ಕಾರಿಗೆ ಹಿಂದಿನಿಂದ ಬಂದು ಡಿಕ್ಕಿ ಹೊಡೆಯಲು ಕಾರಣ ಆಗಿದ್ದು, ಆ ಮೂಲಕ 1 ನೇ ಆರೋಪಿಯಾದ ನೀನು ಭಾ.ದಂ.ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಎರಡನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ 2 ನೇ ಆರೋಪಿಯಾದ ನೀನು ಮೋಟಾರ ಸೈಕಲ ನಂಬರ ಕೆಎ-65-/ಇ/8329 ನೇದ್ದನ್ನು ಹಳಿಯಾಳ ಪಟ್ಟಣದ ಶಿವಾಜಿ ಸರ್ಕಲ್ ನಿಂದ ಯಲ್ಲಾಪುರ ನಾಕಾ ಕಡೆಗೆ ಅತೀವೇಗ ಹಾಗೂ ಮತ್ತು ಅಜಾಕರೊಕತೆಯಿಂದ ಚಲಾಯಿಸಿಕೊಂಡು ಬಂದು, ಬೊಂಗಾಳಿ ಕಿರಾಣಿ ಅಂಗಡಿ ಎದುರಿಗೆ ನಿಮ್ಮ ಮುಂದೆ ಹೋಗುತ್ತಿದ್ದ ಕಾರ ನಂಬರ ಕೆಎ-65/ಎಮ್/0341 ನೇದ್ದಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸುವ ಮೂಲಕ 2 ನೇ ಆರೋಪಿಯಾದ ಭಾ.ದಂ.ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಮೂರನೇಯದಾಗಿ, 1 ಮತ್ತು 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ ನಿಮ್ಮ ಈ ಮೇಲಿನ ಕೃತ್ಯಗಳಿಂದಾಗಿ ಮೋಟಾರ ಸೈಕಲ್ ನಂಬರ ಕೆಎ-65/ಇ-8329 ನೇದ್ದರ ಹಿಂಬದಿ ಸವಾರನಾದ ಮೃತ ಸಿದ್ದಪ್ಪ ಚನ್ನಪ್ಪ ಸುಂಕದ ಈತನು ಬೈಕ್ ನಿಂದ ರಸ್ತೆಯ ಮೇಲೆ ಬಿದ್ದು ಅವರ ತಲೆಗೆ ತೀವ್ರ ಸ್ವರೂಪದ ಮರಣಾಂತಿಕ ಗಾಯ ಪಡಿಸಿ, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಹಾಗೂ ಅವರ ಸಾವಿಗೆ 1 ಮತ್ತು 2 ನೇ ಆರೋಪಿತರಾದ ನೀವು ಅಪರಾಧಿಕ ನರಹತ್ಯೆ ಮಾಡುವ ಉದ್ದೇಶವಿಲ್ಲದೇ ಮಾಡಿರುವ ಅಪಘಾತವೇ ಕಾರಣ ಆಗಿರುವ ಮೂಲಕ ನೀವು ಭಾ.ದಂ.ಸಂ. ಕಲಂ 304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ನಾಲ್ಕನೇಯದಾಗಿ, ಎರಡನೇ ಆರೋಪಿಯಾದ ನೀನು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ ಮೇಲೆ ವಿವರಿಸಿದ ಮೋಟಾರ ಸೈಕಲ್ ನಂಬರ ಕೆಎ-65/ಇ-8329 ನೇದ್ದರ ಚಾಲನಾ ಪ್ರಮಾಣ ಪತ್ರ ಹೊಂದಿರದೇ ಚಲಾಯಿಸುವ ಮೂಲಕ ಮೋಟಾರ ವಾಹನಗಳ **ಕಾಯ್ದೆ** ಕಲಂ 3 (1) ಸಹಕಲಂ 181 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಕೊನೇಯದಾಗಿ, ಮೇಲೆ ಹೇಳಿದ ಅದೇ ದಿನಾಂಕ, ಅದೇ ಸಮಯ, ಸಂದರ್ಭ ಹಾಗೂ ಅದೇ ಸ್ಥಳದಲ್ಲಿ ಎರಡನೇ ಆರೋಪಿಯಾದ ನೀನು ಮೇಲೆ ವಿವರಿಸಿದ ಮೋಟಾರ ಸೈಕಲ್ ನಂಬರ ಕೆಎ-65/ಇ-8329 ನೇದ್ದನ್ನು ವಿಮಾ ಪ್ರಮಾಣ ಪತ್ರ ಹೊಂದಿರದೇ ಚಲಾಯಿಸಿ, ಈ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ 146 ಸಹಕಲಂ 196 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಆರೋಪಿ ಕ್ರ.1

ಪ್ರಶ್ನೆ 1 : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ :

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ :

ಆರೋಪಿ ಕ್ರ.2

ಪ್ರಶ್ನೆ 1 : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ :

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ :

(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸ್ಥಳ : ಹಳಿಯಾಳ.

ದಿನಾಂಕ : 15-12-2023. ಪ್ರ.ದ.ನ್ಯಾದಂ., ಹಳಿಯಾಳ.